ದೂರವಾಣಿ: 6361532058

E-mail: regexamku@gmail.com

# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಯು.ಜಿ-2/ /2019-20
M307

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451
ದಿನಾಂಕ: 11/03/2020.

## ಸುತ್ತೋಲೆ

ವಿಷಯ : 1) ಏಪ್ರಿಲ್/ಮೇ-2020ರಲ್ಲಿ ನಡೆಯುವ ಸ್ನಾತಕ ಪದವಿ ಪರೀಕ್ಷೆಗೆ ಶುಲ್ಕ ಪಾವತಿಸುವ ದಿನಾಂಕ ಮುಂದೂಡಿರುವ ಬಗ್ಗೆ.
2) ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸುವ ಬಗ್ಗೆ.
3) ಏಪ್ರಿಲ್/ಮೇ-2020ರ ಸ್ನಾತಕ ಪರೀಕ್ಷೆಯ ಕರಡು ವೇಳಾಪಟ್ಟಿ ಪ್ರಕಟಣೆ ಕುರಿತು.

*****

ಸ್ನಾತಕ ಪದವಿ (***Regular/Double the Duration***) ಪರೀಕ್ಷೆ ಲಿಖಿತ ಪರೀಕ್ಷೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಮತ್ತು ಪರೀಕ್ಷಾ ಶುಲ್ಕ ಪಾವತಿಸಲು ಈ ಕೆಳಕಂಡಂತೆ ದಿನಾಂಕವನ್ನು ಮುಂದೂಡಲಾಗಿದೆ.

**ಕಡ್ಡಾಯವಾಗಿ ಆನ್‌ಲೈನ್‌ನಲ್ಲಿಯೇ ಅರ್ಜಿ ಸಲ್ಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ 6361532058/7022254997 ಸಂಪರ್ಕಿಸುವುದು.**

| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕಗಳು: | | |
|---|---|---|
| 1 | ದಂಡ ಶುಲ್ಕವಿಲ್ಲದೆ | 12-03-2020 ರವರೆಗೆ |
| 2 | ದಂಡ ಶುಲ್ಕ ರೂ. 100=00ರಂತೆ (ಪ್ರತಿ ಸೆಮಿಸ್ಟರ್‌ಗೆ) | 13-03-2020 ಮತ್ತು 14-03-2020 ರವರೆಗೆ |
| 3 | ದಂಡ ಶುಲ್ಕ ರೂ. 500=00ರಂತೆ (ಪ್ರತಿ ಸೆಮಿಸ್ಟರ್‌ಗೆ) | 15-03-2020 ಮತ್ತು 16-03-2020 ರವರೆಗೆ |

ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ಆನ್‌ಲೈನ್‌ನಲ್ಲಿ ನಮೂದಿಸುವ ಮೊದಲು ವಿದ್ಯಾರ್ಥಿಗಳ ಗಮನಕ್ಕೆ ತಂದು, ಕಡ್ಡಾಯವಾಗಿ ವಿದ್ಯಾರ್ಥಿಗಳ ಸಹಿ ಪಡೆದು, ಆನ್‌ಲೈನ್‌ನಲ್ಲಿ ನಮೂದಿಸಬೇಕು.

ಯಾವುದೇ ವಿದ್ಯಾರ್ಥಿಯ ಆಂತರಿಕ ಅಂಕ ಬಿಟ್ಟುಹೋದಲ್ಲಿ ಅಥವಾ ಹಾರ್ಡ್‌ಕಾಪಿಯನ್ನು ನಂತರ ಕಾಲೇಜಿನಿಂದ ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಅಂತಹ ಮನವಿಗಳನ್ನು ತಿರಸ್ಕರಿಸಲಾಗುವುದು.

**ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ದಿನಾಂಕ: 04-04-2020 ರ ಒಳಗಾಗಿ ಅನ್‌ಲೈನ್ ಮೂಲಕ ನಮೂದಿಸುವುದು.**

**ಏಪ್ರಿಲ್ / ಮೇ 2020ರ ಸ್ನಾತಕ ಪದವಿಗಳ ಲಿಖಿತ ಪರೀಕ್ಷೆಗಳು ದಿನಾಂಕ: 16-04-2020 ರಿಂದ ಪ್ರಾರಂಭವಾಗುತ್ತವೆ. ಈ ಸಂಬಂಧ ಕರಡು ವೇಳಾಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಸದರಿ ವೇಳಾ ಪಟ್ಟಿಯನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ಸೂಚನಾಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.**

ಕರಡು ವೇಳಾಪಟ್ಟಿಯಲ್ಲಿ ತಿದ್ದುಪಡಿ/ನ್ಯೂನತೆಗಳಿದ್ದಲ್ಲಿ ದಿನಾಂಕ:16-03-2020ರೊಳಗೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ಲಿಖಿತವಾಗಿ ಸಲ್ಲಿಸಲು ತಿಳಿಸಲಾಗಿದೆ. ಸೂಚಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಸದರಿ ವೇಳಾಪಟ್ಟಿಯನ್ನು ಅಂತಿಮವೆಂದು ಪರಿಗಣಿಸಿ ಪ್ರಕಟಿಸಲಾಗುವುದು.

11/3

(ಪ್ರೊ. ಎಂ. ವೆಂಕಟೇಶ್ವರಲು)
ಕುಲಸಚಿವ (ಪರೀಕ್ಷಾಂಗ)
ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ

ಗೆ,

**ಕುವೆಂಪು ವಿಶ್ವವಿದ್ಯಾನಿಲಯದ ಶಿವಮೊಗ್ಗ / ಚಿಕ್ಕಮಗಳೂರು/ದಾವಣಗೆರೆ/ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

**ಪ್ರತಿ:**

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ,
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ,
3. ಸರ್ಕಾರಿ ಲೆಕ್ಕಪರಿಶೋಧಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ,
4. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ಅಧೀಕ್ಷಕರು, ಪರೀಕ್ಷಾ ವಿಭಾಗ ಹಾಗೂ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
6. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
7. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
9. ಕಛೇರಿ ಪ್ರತಿ.